ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಗಳ ನ್ಯಾಯಾಲಯ ದಲ್ಲಿ, ಆಲೂರು .

ಸಿ.ಸಿ.ಸಂಖ್ಯೆ: 142/2020

| | | |
|---|---|---|
| ಸಾಕ್ಷಿದಾರರ ಹೆಸರು | ವನಜಾಕ್ಷಿ ಆರ್ ಎನ್ | ಸಿ.ಡಬ್ಲ್ಯೂ: 6 |
| ಗಂಡನ / ತಂದೆ ಹೆಸರು | ಅಶೋಕ ಎಸ್. ಹೆಚ್. | ಪಿ.ಡಬ್ಲ್ಯೂ: 4 |
| ವಯಸ್ಸು | 45 ವರ್ಷ | |
| ಉದ್ಯೋಗ | ಅಬಕಾರಿ ನಿರೀಕ್ಷಕರು | |
| ವಾಸಸ್ಥಳ | ತಿಪಟೂರು. | |

ಪ್ರಮಾಣ ವಚನ ಬೋಧಿಸಲಾಯಿತು.

ದಿ: 11.09.2025

ಮುಖ್ಯ ವಿಚಾರಣೆ: ಸಸಅ ರಿಂದ

2017 ರಿಂದ ಜುಲೈ 2021 ರವರೆಗೂ ಹಾಸನ 2ನೇ ವಲಯದಲ್ಲಿ ಕರ್ತವ್ಯ ಮಾಡಿರುತ್ತೇನೆ. ದಿ.06.11.2019 ರಂದು ನಾನು ಮತ್ತು ಚಾಸಾ 3 ಮತ್ತು 4 ರವರು ಕರಿಗೋಡನಹಳ್ಳಿ ಗ್ರಾಮದಿಂದ ಚಾಕನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಗಸ್ತು ಮಾಡುತ್ತಿರುವಾಗ ಹಸನೂರು ಗ್ರಾಮಕ್ಕೆ ಅಕ್ರಮವಾಗಿ ಮದ್ಯ ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ಮಾಹಿತಿ ಬಂದ ಆಧಾರದ ಮೇಲೆ ಚಾಸಾ 1 ಮತ್ತು 2 ರವನ್ನು ಬರಮಾಡಿಕೊಂಡು ಶೋಧನಾ ಸಮುಚ್ಚಿತ ವಾರೆಂಟ್

ತಯಾರಿಸಿಕೊಂಡು ಹಸನೂರು ಗ್ರಾಮದ ಬಸ್ ನಿಲ್ದಾಣದ ಬಳಿ ಹೋದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಒಬ್ಬ ಮಹಿಳೆ ಬಿಳಿ ಚೀಲ ಬಿಟ್ಟು ಓಡಿ ಹೋಗಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ನಿಸಿರುತ್ತೇವೆ ಸಿಕ್ಕಿರುವುದಿಲ್ಲ. ಸ್ಥಳದಲ್ಲಿದ್ದ ಚೀಲವನ್ನು ತೆಗೆದು ನೋಡಲಾಗಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ವಿಸ್ಕಿ 26 ಟೆಟ್ರಾ ಪ್ಯಾಕ್ ಗಳು ದೊರಕಿದ್ದು ಅವುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಮೊಹರು ಮ. 2-3.45 ರವರೆಗೆ ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಮಹಿಳೆಯ ಹೆಸರು ವಿಚಾರಿಸಲಾಗಿ ಭಾಗ್ಯ C/o ಜಯಕುಮಾರ್ ಎಂದು ತಿಳಿದು ಬಂದಿರುತ್ತದೆ. ಠಾಣೆಗೆ ಹಿಂದಿರುಗಿ ಪ್ರ.ವ.ವ ದಾಖಲಿಸಿರುತ್ತೇನೆ. ಪ್ರ.ವ.ವ ಯನ್ನು ನಿಪಿ 6 ಎಂದು ಸಾಕ್ಷಿಯ ಸಹಿಯನ್ನು ನಿಪಿ 6ಎ ಎಂದು ಗುರುತಿಸಲಾಯಿತು. ಚಾಸಾ 5 ರ ಮುಖಾಂತರ ಮು.ಮಾ. ಎಫ್ ಎಸ್ ಎಲ್ ಗೆ ಕಳಿಸಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು ಸಾಕ್ಷಿ ಸಹಿಯನ್ನು ನಿಪಿ 7ಎ ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 7 ರವರಿಗೆ ನೀಡಿರುತ್ತೇನೆ. ಚಾಸಾ 7 ರವರು ಈಗ ಮರಣ ಹೊಂದಿರುತ್ತಾರೆ. ಚಾಸಾ 7 ರವರು ಸಾಕ್ಷಿದಾರರ ಹೇಳಿಕೆ ದಾಖಲಿಸಿ ಅಂತಿಮ ವರದಿ ಸಲ್ಲಿಸಿರುತ್ತಾರೆ.

ಸಾಕ್ಷಿ ನಿಪಿ 1 ಮತ್ತು 3 ರಲ್ಲಿ ತನ್ನ ಸಹಿ ನೋಡಿ ಗುರ್ತಿಸಿದ್ದು

ಅದನ್ನು ನಿಪಿ-1(ಡಿ) ಮತ್ತು 3ಸಿ ಎಂದು ಗುರ್ತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ.1ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಟಿ.ಎಸ್.ಎಸ್. ವಕೀಲರಿಂದಃ**

ಘಟನಾ ಸ್ಥಳದಲ್ಲಿ 3 ರಸ್ತೆಗಳು ಸೇರುತ್ತದೆ ಎಂದರೆ 2 ರಸ್ತೆಗಳು ಸೇರುತ್ತವೆ. ಒಂದು ರಸ್ತೆ ಕರಿಗೋಡನಹಳ್ಳಿಗೆ ಹೋಗುತ್ತದೆ ಇನ್ನೊಂದು ರಸ್ತೆ ಚಾಕನಹಳ್ಳಿಗೆ ಹೋಗುತ್ತದೆ. ಬಿಳಿ ಚೀಲ ಎಲ್ಲಿ ಸಿಕ್ಕಿರುತ್ತದೆ ಎಂದರೆ ಬಸ್ ನಿಲ್ದಾಣದಲ್ಲಿ ಸಿಕ್ಕಿರುತ್ತದೆ. ಚೀಲದ ಚಹರೆಯ ಬಗ್ಗೆ ಮಹಜರ್ ನಲ್ಲಿ ಬರೆದಿದೆಯೇ ಎಂದರೆ ಇಲ್ಲ. ಚೀಲದ ಮೇಲೆ ಪಂಚರ ಸಹಿ ಪಡೆದಿದ್ದೀರ ಎಂದರೆ ಇಲ್ಲ. ಟೆಟ್ರಾ ಪ್ಯಾಕ್‌ಗಳು ಯಾವ ಅಂಗಡಿಯಿಂದ ಸರಬರಾಜಾಗಿರುವ ಬಗ್ಗೆ ತಿಳಿದುಕೊಂಡಿದ್ದೀರ ಎಂದರೆ ಇಲ್ಲ. ಆರೋಪಿಯ ಹೆಸರು ಯಾರು ತಿಳಿಸಿರುತ್ತಾರೆ ಎಂದರೆ ಚಾಸಾ 1 ಮತ್ತು 2 ರವರು. ನಿಪಿ 1 ರಡಿಯಲ್ಲಿ ಮು.ಮಾ.1 ಮತ್ತು 2 ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಆರೋಪಿ ಇರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2ಕ್ಕೂ ಮತ್ತು ಈ ಪ್ರಕರಣದ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಚಾಸಾ 7 ರವರು ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .